ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಿಂದಃ-

ನಾನು 8 ನೇ ತರಗತಿ ವರೆಗೆ ಕಲಿತಿದ್ದೇನೆ, ನನಗೆ ಓದಲು ಬರೆಯಲು ಬರುತ್ತದೆ. ವಾದಿಗಳು ನನಗೆ ಗೊತ್ತು. ಭಾಗಾಂಶಕ್ಕೋಸ್ಕರ ಈ ಕೇಸನ್ನು ಹಾಕಿದ್ದಾರೆ. ನನ್ನ ಮುತ್ತಾತನ ಹೆಸರು ಸಂಜೀವಯ್ಯ ಎಂದರೆ ಸರಿ. ನನ್ನ ಮುತ್ತಾತ ಸಂಜೀವಯ್ಯನಿಗೆ ಹನುಮಕ್ಕ ಮತ್ತು ಸಂಜೀವಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. 1ನೇ ಹೆಂಡತಿ ಹನುಮಕ್ಕನಿಗೆ 4 ಜನ ಮಕ್ಕಳು ಎಂದರೆ ಸರಿ. ಅವರುಗಳ ಹೆಸರು ಹನುಮಯ್ಯ, ದುಮ್ಮಸಂದ್ರಯ್ಯ, ಹನುಮಯ್ಯ @ ಕುರುಡಯ್ಯ ಮತ್ತು ವೋಟಮ್ಮ ಎಂದರೆ ಸರಿ. 2ನೇ ಹೆಂಡತಿಗೆ 7 ಜನ ಮಕ್ಕಳು ಎಂದರೆ ನನಗೆ ಮಾಹಿತಿ ಇಲ್ಲ. ದೊಡ್ಡಹನುಮಯ್ಯನ ಹೆಂಡತಿ ಹೆಸರು ನರಸಮ್ಮ ಎಂದರೆ ನನಗೆ ಮಾಹಿತಿ ಇಲ್ಲ. ವೋಟಯ್ಯನಿಗೆ ನಾರಾಯಣಮ್ಮ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. ವೋಟಯ್ಯನಿಗೆ ಮುತ್ತಮ್ಮ, ವೆಂಕಟರಮಣಪ್ಪ, ದೊಡ್ಡತಮ್ಮಯ್ಯ, ಚಿಕ್ಕತಮ್ಮಯ್ಯ ಮತ್ತು ಮುದ್ದಯ್ಯ ಎಂಬ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ವೆಂಕಟರಮಣಪ್ಪನಿಗೆ ಸಕ್ಕಮ್ಮ ಎಂಬ ಹೆಂಡತಿ ಎಂದರೆ ಸರಿಯಲ್ಲ. ವೆಂಕಟರಮಣಪ್ಪನಿಗೆ ಹನುಮಂತರಾಜು, ಚಿಕ್ಕಹನುಮಂತಯ್ಯ, ಮೂಗಯ್ಯ ಮತ್ತು ನಾರಾಯಣಿ ಎಂಬ ಮಕ್ಕಳು ಎಂದರೆ ಸರಿ. ಹನುಮಂತರಾಜುರವರ ಹೆಂಡತಿ ಹೆಸರು ಭಾಗ್ಯಮ್ಮ ಎಂದರೆ ಸರಿ. ದೊಡ್ಡತಮ್ಮಯ್ಯನಿಗೆ ಮುನಿಯಮ್ಮ ಎಂದು ಹೆಂಡತಿ ಎಂದರೆ ಸರಿ. ದೊಡ್ಡತಮ್ಮಯ್ಯನಿಗೆ ರವಿ, ಆನಂದ ಮತ್ತು ತಾಯಮ್ಮ ಎಂಬ ಮಕಕಳು ಎಂದರೆ ಸರಿ. ಚಿಕ್ಕತಮ್ಮಯ್ಯನಿಗೆ ನರಸಮ್ಮ ಎಂಬ ಹೆಂಡತಿ ಎಂದರೆ ಸರಿ, ಚಿಕ್ಕತಮ್ಮಯ್ಯನಿಗೆ ಮಾರುತಿ, ನರಸಮ್ಮ, ತಾಯಮ್ಮ, ನಾರಾಯಣಮ್ಮ ಎಂಬ ಮಕ್ಕಳು ಎಂದರೆ ಸರಿ.

ಚಿಕ್ಕಹನುಮಯ್ಯನ ಹೆಂಡತಿ ಹೆಸರು ದುರ್ಗಮ್ಮ ಎಂದರೆ ಸರಿ. ಅವರಿಗೆ ಗಂಗಮ್ಮ ಲಕ್ಷ್ಮಮ್ಮ ಮತ್ತು ನಾಗರಾಜು ಎಂಬ ಮಕ್ಕಳು ಎಂದರೆ ಸರಿ. ವಟಗಯ್ಯನ ಹೆಂಡತಿ ಹೆಸರು ಕೆಂಪಮ್ಮ ಎಂದರೆ ಸರಿ. ವಟಗಪ್ಪ ನನಗೆ ತಾತ ಆಗಬೇಕು. ವಟಗಪ್ಪನಿಗೆ ಶಂಕರಪ್ಪ ಮತ್ತು ದೊಡ್ಡಹನುಮಯ್ಯ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ದೊಡ್ಡಹನುಮಯ್ಯನಿಗೆ ತಿಮ್ಮಕ್ಕ ಎಂಬ ಹೆಂಡತಿ ಎಂದರೆ ಸರಿ. ಇವರುಗಳಿಗೆ ನಾಗರಾಜು, ಪುಟ್ಟಸ್ವಾಮಿ ಮತ್ತು ಚಂದ್ರ ಎಂಬ ಮಕ್ಕಳು ಎಂದರೆ ಸರಿ, ನಾಗರಾಜು ಎಂದರೆ ನಾನು ಎಂದರೆ ಸರಿ. ಶಂಕರಪ್ಪನ ಹೆಂಡತಿ ಲಕ್ಷ್ಮಿ ಎಂದರೆ ಸರಿ, ಇವರಿಗೆ ರೂಪ ಮತ್ತು ಮಂಜು ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಚಿಕ್ಕಹನುಮಯ್ಯನ 3ನೇ ಮಗ ನಾಗರಾಜು ಎಂದರೆ ಸರಿ . ಇವರಿಗೆ ಗಂಗಮ್ಮ ಎಂಬುವವರು ಹೆಂಡತಿ ಎಂದರೆ ಸರಿ, ಚಿಕ್ಕಹನುಮಯ್ಯನಿಗೆ ಮಂಜುಳ ಮತ್ತು ಅನುಸೂಯ ಮಕ್ಕಳು ಎಂದರೆ ಸರಿ. ಹನುಮಂತಯ್ಯನ ಹೆಂಡತಿಯ ಹೆಸರು ಸಿದ್ದಮ್ಮ ಎಂದರೆ ಸರಿ. ಇವರಿಗೆ ಹನುಮಾಂಜನಿ ಮತ್ತು ರುದ್ರಯ್ಯ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಹನುಮಾಂಜನಿಯ ಹೆಂಡತಿಯ ಹೆಸರು ಓಬಕ್ಕ ಎಂದರೆ ಸರಿ, ಇವರಿಗೆ ಗಿರಿಜ ಮತ್ತು ಮಹದೇವಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಸರಿ, ರುರುದ್ರಯ್ಯನ ಹೆಂಡತಿ ಲಕ್ಷ್ಮಮ್ಮ ಎಂದರೆ ಸರಿ ಇವರಿಗೆ ಕಾವ್ಯಮತ್ತು ಕವನ ಎಂಬ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ವಾದಿಗಳ ವಾರಸುದಾರರಾದ 4 ನೇ ಮೋಟಯ್ಯ , 5 ನೇ ಚಿಕ್ಕಹನುಮಯ್ಯ, 7 ನೇ ಚಿನ್ನಹನುಮಂತಯ್ಯ ಇವರ ಕುಟುಂಬದ ವಾರಸುದಾರರು ಈ ಕೇಸನ್ನು ಹಾಕಿದ್ದಾರೆ ಎಂದರೆ ಸರಿ. ದೊಡ್ಡಹನುಮಯ್ಯ ಮತ್ತು ಶಂಕರಪ್ಪನ ವಾರಸುದಾರರು ಪ್ರತಿವಾದಿಗಳು ಎಂದರೆ ಸರಿ.

ದಾವಾಸ್ವತ್ತು ಸರ್ಕಾರದ ಆಸ್ತಿ ಎಂದರೆ ಸರಿ. ದಾವಾಸ್ವತ್ತು ಮೂಲತಃ ನನ್ನ ಮುತ್ತಾತ ಸಂಜೀವಯ್ಯನಿಗೆ ಮಂಜೂರು ಆಗಿತ್ತು ಎಂದರೆ ಸರಿ. ಒಟ್ಟು 3 ಎಕರೆ 24 ಗುಂಟೆ ಹಾಗೂ 6 ಗುಂಟೆ ಕರಾಬು ನಿಡಿ-5 ರಲ್ಲಿ ತೋರಿಸಿರುವಂತೆ ನನ್ನ ಮುತ್ತಾತನ ಹೆಸರಿಗೆ ಇದೆ ಎಂದರೆ ಸರಿ. ನಂತರದಲ್ಲಿ ಸಂಜಿವಪ್ಪ ತೀರಿಕೊಂಡ ನಂತರ ಈ ದಾವಾಸ್ವತ್ತು ಮರು ಮಂಜೂರಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಹನುಮಯ್ಯ, ಹನುಮ @ ಕುರುಡ, ಹನುಮ @ ವಟಗಯ್ಯ, ದುಮ್ಮ ಸಂದ್ರಯ್ಯ ಮತ್ತು ಹನುಮಯ್ಯ ಇವರುಗಳಿಗೆ ರೀಗ್ರಾಂಟ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿ ಹಾಕಿರುವ ಲಿಖಿತ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನನ್ನ ಲಿಖಿತ ಹೇಳಿಕೆಯಲ್ಲಿ 4 ಜನರಿಗೆ ರೀಗ್ರಾಂಟ್ ಆಗಿದೆ ಎಂದು ನಾನೇ ಹೇಳಿದ್ದೇನೆ ಎಂದರೆ ಸರಿ. ಸಂಜೀವಯ್ಯನ ಮೊದಲನೆ ಹೆಂಡತಿ ಹನುಮಕ್ಕನಿಗೆ 1 ಎಕರೆ 27 ಗುಂಟೆ 2 ನೇ ಹೆಂಡತಿ ಸಂಜೀಮ್ಮನ ಮಕ್ಕಳಿಗೆ 1 ಎಕರೆ 27 ಗುಂಟೆ ಎಂದು ಭಾಗ ಆಯಿತು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಭಾಗ ಆದ ನಂತರ ಮೊದಲನೆ ಹೆಂಡತಿ 3 ಜನ ಮಕ್ಕಳ ಹೆಸರಿಗೆ ಖಾತೆಯಾಯಿತು ಎಂದರೆ ನನಗೆ ಗೊತ್ತಿಲ್ಲ. ವಟಗಯ್ಯನು 2ನೇ ಹೆಂಡತಿಯ ಹಿರಿಯ ಮಗನಾದ್ದರಿಂದ ಆತನ ಹೆಸರಿಗೆ 1 ಎಕರೆ 27 ಗುಂಟೆ ಜಮೀನು ಖಾತೆಯಾಯಿತು ಎಂದರೆ ಸರಿಯಲ್ಲ. ಮೊದಲನೆ ಹೆಂಡತಿಯ ಮಕ್ಕಳು ಅವರ ಭಾಗಕ್ಕೆ ಬಂದಂತಹ ಎಲ್ಲಾ ಆಸ್ತಿಯನ್ನು ಮಾರಿಕೊಂಡರು ಎಂದರೆ ಸರಿ. 2ನೇ ಹೆಂಡತಿಯ ಮಕ್ಕಳಿಗೆ ಬಂದ ಬಂದ ಭಾಗವನ್ನು 2 ನೇ ಹೆಂತಿಯು ಮಕ್ಕಳೆಲ್ಲಾ ಸೇರಿ ಒಟ್ಟಾಗಿ ಅವರ ಭಾಗಕ್ಕೆ ಬಂದ ಆಸ್ತಿಯನ್ನು ಒಟ್ಟಾಗಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ಎಕರೆ 27 ಗುಂಟೆ ಜಮೀನನ್ನು ದೊಡ್ಡಹನುಮಯ್ಯನ ಮಕ್ಕಳು ಶಂಕರಪ್ಪ ಅವರ ಹೆಸರಿಗೆ ಇದ್ದ ಖಾತೆಯನ್ನು ಮಾಡಿಸಿಕೊಂಡರು ಎಂದರೆ ನಿಜ ಅವರು ಮಾಡಿಸಿಕೊಂಡಿದ್ದಾರೆ

ಎಂದು ನುಡಿಯುತ್ತಾರೆ. ದೊಡ್ಡಹನುಮಯ್ಯ ತೀರಿಕೊಂಡ ನಂತರ ಅವರ ಹೆಂಡತ ತಿಮ್ಮಕ್ಕ ಅವರ ಮಕ್ಕಳಾದ ನಾನು ನಾಗರಾಜು , ಪುಟ್ಟಸ್ವಾಮಿ , ಚಂದ್ರಶೇಖರ ಇವರು 34 ಗುಂಟೆ ಜಮೀನನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೀರಾ ಎಂದರೆ ಸರಿ. ನನ್ನ ತಂದೆಯ ತಮ್ಮ ಶಂಕರಪ್ಪ 32 1/2 ಗುಂಟೆ ಜಮೀನನ್ನು ಖಾತೆ ಮಾಡಿಸಿಕೊಂಡರು ಎಂದರೆ ಸರಿ. ಈ ಖಾತೆಯನ್ನು 2010 ನೇ ಇಸವಿಯಲ್ಲಿ ಮಾಡಿಸಿಕೊಳ್ಳಲಾಯಿತು ಎಂದರೆ ಸರಿ. ವಾದಿಗಳಿಗೆ ಗೊತ್ತಾಗದ ಹಾಗೆ ಮೋಸದಿಂದ ನಾವು ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸಾಕ್ಷಿ ನಾವು ಮಾಡಿಸಿಕೊಂಡಿಲ್ಲ ನನ್ನ ತಂದೆ ಮತ್ತು ಚಿಕ್ಕಪ್ಪ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಮೋಸದಿಂದ ಮಾಡಿಸಿಕೊಂಡ ಖಾತೆಯಲ್ಲಿದ್ದ ಜಮೀನನ್ನು ಬೇರೆ 3 ನೇ ವ್ಯಕ್ತಿಗೆ ಮಾರಾಟ ಮಾಡಲು ಪ್ರಯತ್ನ ಪಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ವಿಚಾರ ತಿಳಿದ ನಂತರ ನಮಗೆ ಮೋಸ ಮಾಡಿದ್ದೀರ ನಮಗೂ ಭಾಗ ಬರಬೇಕೆಂದು ಕೇಳಿದ್ದಾರೆ ಎಂದರೆ ಸರಿಯಲ್ಲ. ಊರಿನಲ್ಲಿ ಪಂಚಾಯ್ತಿ ಕೂಡ ಆಯಿತು ಎಂದರೆ ಸರಿಯಲ್ಲ. ನಾವು ಭಾಗ ಕೊಡದೇ ಇದ್ದಿದ್ದಕ್ಕೆ ಭಾಗಕ್ಕೆ ಈ ಕೇಸನ್ನು ಹಾಕಿದ್ದಾರೆ ಎಂದರೆ ಸಾಕ್ಷಿ ಅವರು ಆ ನಂತರದಲ್ಲಿ ಹಾಕಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. 1ನೇಲ ಹೆಂಡತಿಯ ಮಕ್ಕಳು ಮಾರಾಟ ಮಾಡಿಕೊಡಿಂರುವ ಆಸ್ತಿಯನ್ನು ಈ ದಾವೆಯಲ್ಲಿ ಸೇಸಿ ಹಾಕಿದ್ದೀರಾ ಎಂದರೆ ಸರಿ. ಅವರು ಮಾರಾಟ ಮಾಡಿರುವ ಕ್ರಯಪತ್ರವನ್ನು ತಂದು ಹಾಕಿದ್ದೇನೆ ಎಂದರೆ ಸರಿ. 1 ನೇ ಹೆಂಡತಿಯ ಮಕ್ಕಳು ಅವರ ಭಾಗಕ್ಕೆ ಬಂದಂತಹ ಆಸ್ತಿಯನ್ನು ಮಾರಾಟ ಮಾಡಿಕೊಂಡಿದಾದರೆ ಅಂಥಹ ಆಸ್ತಿಯನ್ನು ಈ ಕೇಸಿನಲ್ಲಿ ಸೇಸಿದ್ದೇನೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ನಿಡಿ-18 ರಿಂದ ನಿಡಿ-24 ರವರೆಗೆ ಇರುವ ಕ್ರಯಪತ್ರಕ್ಕೂ ದಾವಾಸ್ವತ್ತಿನ ವಿಸ್ತೀರ್ಣಕ್ಕೂ ಸಂಬಂಧ ಇದಲ್ಲಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಡಿ-29 ಒಪ್ಪಿ ಗೆ ಪತ್ರ. ಇದರಲ್ಲಿರುವ ಸರ್ವೆ ನಂಬರ್ 10ಪಿ1 ಹಳೆ ನಂಬರ್, ಹೊಸ ನಂಬರ್ 10ಪಿ 8 ಎಂದರೆ ಸರಿ. ದಾವಾಸ್ವತ್ತಿನ ಸವೆ ನಂಬರ್ ಗೂ ಮತ್ತು ನಿಡಿ-29 ರಲ್ಲಿ ಇರುವ ಸರ್ವೆ ನಂಬರ್ ಗೂ ವ್ಯತ್ಯಾಸ ಇದೆ ಎರಡೂ ಬೇರೆ ಬೇರೆ ಸರ್ವೆ ನಂಬರ್ ಎಂದರೆ ಸರಿ. ದಾವಾಸ್ವತ್ತಿಗೆ ಸಂಬಂಧ ಇಲ್ಲದ ನಿಡಿ-29 ನ್ನು ಹಾಕಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿರುವುದರಿಂದ 2ನೇ ಹೆಂಡತಿಯ ಮಕ್ಕಳು ಎಲ್ಲರಿಗೂ ಕೂಡ ದಾವಾಸ್ವತ್ತಿನಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಗಳಿಗೂ ಕೂಡ ಹಕ್ಕು ಇದೆ ಎಂದುಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಬಿಡದಿಯಲ್ಲಿ ಜಮೀನುಗಳಿಗೆ ಬಹಳ ಬೆಲೆ ಎಂದರೆ ಸರಿ. ವಾದಿಗಳಿಗೆ ಯಾವುದೇ ಆಸ್ತಿಯನ್ನು ಕೊಡಬಾರದು ಎಂಬ ಉದ್ದೇಶದಿಂದ ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ಎರಡರಲ್ಲೂ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ನನ್ನ ಪ್ರಮಾಣಪತ್ರದಲ್ಲಿ ಮೊದಲನೆ ಹೆಂಡತಿ ಮಕ್ಕಳನ್ನು ಸೇರಿಸಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. ದಾವಾಸ್ವತ್ತಿಗೂ ಮತ್ತು ಮೊದಲನೆ ಹೆಂಡತಿಯ ಮಕ್ಕಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಮೊದಲನೆ ಹೆಂಡತಿಯ ಮಕ್ಕಳಿಗೆ ದಾವೆಯಲ್ಲಿರುವ 1 ಎಕರೆ 27 ಗುಂಟೆ ಜಮೀನಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಇದೇ ಕಾರಣಕ್ಕಾಗಿ 1ನೇ ಹೆಂಡತಿಯ ಮಕ್ಕಳು ಈ ಕೇಸಿಗೆ ಪಕ್ಷಗಾರರಾಗಿ ಬೇಕಾಗಿಲ್ಲ ಎಂದರೆ ಸರಿ. ನನಗೆ ಈ ಎಲಾಲ ವಿಚಾರ ಗೊತ್ತಿದ್ದರೂ ಕೂಡ ಮೊದಲನೆ ಹೆಂತಿಯ

ಮಕ್ಕಳನ್ನು ಈ ಕೇಸಿನಲ್ಲಿ ಸೇರಿಸಬೇಕು ಮತ್ತು ಅವರ ಮಾರಾಟ ಮಾಡಿರುವ ಕ್ರಯಪತ್ರ ಅವಶ್ಯಕತೆ ಇಲ್ಲದೇ ಇದ್ದರೂ ಕೂಡ ಈ ಕೇಸಿನಲ್ಲಿ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.